ದಿನಾಂಕಃ 06.12.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಭೋದಿಸಲಾಯಿತು.

## ಮುಂದುವರಿದ ಪಾಟೀಸವಾಲುಃ ವಾದಿಪರ ವಕೀಲರಾದ ಶ್ರೀ ಹೆಚ್.ಪಿ.ಎಮ್ ಅವರಿಂದ-

8. ಆ ರೀತ್ಯಾ ವಾದಿಯರು ನನ್ನನ್ನು ಹಲವಾರು ಬಾರಿ ಭೇಟಿ ಮಾಡಿ ಉಳಿಕೆ ರೂ.30,000/- ಪಡೆದುಕೊಂಡು ಕ್ರಯಪತ್ರ ನೊಂದಣಿ ಮಾಡಿಕೊಡಿ ಎಂದು ನನ್ನಲ್ಲಿ ಕೇಳಿಕೊಂಡಿದ್ದರು ಎಂದರೆ ಸುಳ್ಳು. ಆ ನಂತರ ದಿಃ 28.02.2018 ರಲ್ಲಿ ವಾದಿಯರು ನನಗೆ ತಮ್ಮ ವಕೀಲರ ಮೂಲಕ ನೋಟೀಸ್ ಕಳುಹಿಸಿದ್ದರು ಎಂದರೆ ಇರಬಹುದು. ಸದರಿ ನೋಟೀಸ್ ಗೆ ದಿಃ 22.03.2018 ರಂದು ನಾನು ನಮ್ಮ ವಕೀಲರ ಮೂಲಕ ಜವಾಬು ನೋಟೀಸ್ ಕಳುಹಿಸಿದ್ದೆ ಎಂದರೆ ಸರಿ. ನನ್ನ ಜಾವಾಬು ನೋಟೀಸ್ ನಲ್ಲಿರುವ ಎಲ್ಲಾ ಸಂಗತಿಗಳನ್ನು ನಾನು ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ಆ ನಂತರ ವಾದಿಯು ಅನಿವಾರ್ಯವಾಗಿ ಈ ದಾವೆ ಸಲ್ಲಿಸಿದ್ದಾರೆ ಎಂದರೆ ಸುಳ್ಳು.

9. ಆ ನಂತರ ನಾನು ನ್ಯಾಯಾಲಯಕ್ಕೆ ಹಾಜರಾಗಿ ನನ್ನ ಲಿಖಿತ ಹೇಳಿಕೆ ಸಲ್ಲಿಸಿರುತ್ತೇನೆ ಎಂದರೆ ಸರಿ. ನಾನು 7 ನೇ ತರಗತಿ ಓದಿದ್ದೇನೆ. ನಾನು ನನ್ನ ಸಹಿಯನ್ನು ಇಂಗ್ಲೀಷ್ ಭಾಷೆಯಲ್ಲಿ ಮಾಡುತ್ತೇನೆ ಎಂದರೆ ಸರಿ. ನಾನು ನನ್ನ ಲಿಖಿತ ಹೇಳಿಕೆಯ 13 ನೇ ಪ್ಯಾರಾದಲ್ಲಿ ವಾದಿಯು ಪ್ರತಿವಾದಿಗೆ ರೂ.40,000/- ಗಳನ್ನು ಮಾತ್ರ ನೀಡಿದ್ದು ಉಳಿಕೆ ರೂ.80,000/- ಗಳನ್ನು ವಾದಿಯೇ ಇಟ್ಟುಕೊಂಡಿದ್ದಾರೆ ಎಂದು ಹೇಳಿರುತ್ತೇನೆ ಎಂದರೆ ಸರಿ, ಫಿಸಿಕಲ್ ಟೆಸ್ಟ್ ಗೆ ಸದರಿ ಹಣವನ್ನು ಉಳಿಸಿಕೊಂಡಿದ್ದರು ಎಂದು ನಾನು ಹೇಳಿದ್ದೆ. ಅಂದರೆ ದಿಃ 12.12.2014 ರಂದು ವಾದಿ ಪ್ರತಿವಾದಿಗೆ ನೀಡಿದ ರೂ.1,20,000/- ಚೆಕ್ ಬಾಬ್ತು ಪೈಕಿ ಕೇವಲ ರೂ.40,000/-ಗಳನ್ನು ಮಾತ್ರ ಪಡೆದುಕೊಂಡಿರುತ್ತೇನೆ

ಎಂದು ಹೇಳಿದ್ದೇನಾ ಎಂದರೆ ಸಾಕ್ಷಿ ವಾದಿಯು ನನ್ನ 100 ಗ್ರಾಂ ಚಿನ್ನವನ್ನು ಇಟ್ಟುಕೊಂಡು ರೂ.1,20,000/-ಗಳಿಗೆ ಚೆಕ್ ನೀಡಿ ಅದರ ಪೈಕಿ ಫಿಸಿಕಲ್ ಟೆಸ್ಟ್ ಗೆಂದು ರೂ.80,000/- ಉಳಿಸಿಕೊಂಡು ನನಗೆ ಕೇವಲ ರೂ.40,000/- ಗಳನ್ನು ಪಾವತಿಮಾಡಿದ್ದರು ಎಂದು ನಾನು ಹೇಳಿದ್ದೆ, ವಕೀಲರು ಯಾವ ರೀತಿ ಬರೆದಿದ್ದಾರೆ ನನಗೆ ಗೊತ್ತಿಲ್ಲ.

10. ಅದೇ ರೀತಿ ನಿಪಿ.7 ರ 4 ನೇ ಪುಟದ 1 ನೇ ಪ್ಯಾರಾದಲ್ಲಿ ದಿಃ12.12.2014 ರಂದು ರೂ.1,20,000/-ಗಳಿಗೆ ಚಿನ್ನವನ್ನು ಅಡವಿಟ್ಟಿದ್ದು ಸದರಿ ಹಣದ ಪೈಕಿ ರೂ.80,000/-ಗಳನ್ನು ಪಡೆದಿರುತ್ತೇನೆ ಎಂದು ನಾನು ಉತ್ತರ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ದಿಃ12.12.2014 ರಂದು ರೂ.80,000/- ಗಳಿಗೆ ಅಡವಿಟ್ಟಿದ್ದು ಸದರಿ ಹಣವನ್ನು ನಿಮ್ಮ ಕಕ್ಷಿದಾರರು ಹಿನಕಲ್ ಗ್ರಾಮದ ಕಾವೇರಿ ಗ್ರಾಮೀಣ ಬ್ಯಾಂಕಿನ ಚೆಕ್ ಅನ್ನು ನಮ್ಮ ಕಕ್ಷಿದಾರರ ಮುಖಾಂತರ ರೂ.1,20,000/- ಹಣ ತರೀಸಿಕೊಂಡು ಸದರಿ ಹಣದಲ್ಲಿ ನಮ್ಮ ಕಕ್ಷಿದಾರರಿಗೆ ರೂ.80,000/- ಮಾತ್ರ ನೀಡಿ ಸದರಿ ಹಣಕ್ಕೆ ನಮ್ಮ ಕಕ್ಷಿದಾರರು ಪ್ರತಿತಿಂಗಳು ಒಂದು ವರ್ಷದ ತನಕ ಬಡ್ಡಿ ಪಾವತಿಸಿ ತದನಂತರ ಅಸಲು ಮತ್ತು ಬಡ್ಡಿ ಹಣವನ್ನು ನಿಮ್ಮ ಕಕ್ಷಿದಾರರಿಗೆ ಪೂರ್ಣ ಸಂದಾಯ ಮಾಡಿದ್ದರು ಸಹ ನಮ್ಮ ಕಕ್ಷಿದಾರರು ನಿಮ್ಮ ಕಕ್ಷಿದಾರರ ಬಳಿ ಇಟ್ಟಿದ್ದ ಚಿನ್ನದ ಒಡವೆಗಳನ್ನು ಹಿಂದಿರುಗಿಸದೆ ತೊಂದರೆ ವಿನಃ ಕಾರಣ ನಮ್ಮ ಕಕ್ಷಿದಾರರಿಗೆ ತೊಂದರೆ ಕೊಡುತ್ತಿದ್ದಾರೆ ಎಂದು ಬರೆಯಿಸಿದ್ದೇನೆ ಎಂದರೆ ಫಿಸಿಕಲ್ ಟೆಸ್ಟ್ ಗೆ ಎಂದು ಹೇಳಿದ್ದೆ ಅದು ಬಿಟ್ಟುಹೋಗಿದೆ ಎಂದು ನುಡಿಯುತ್ತಾರೆ.

11. ನೋಟೀಸ್ ನಲ್ಲಿ ರೂ.80,000/- ಪಡೆದಿದ್ದೇನೆ ಎಂದು ಹೇಳಿ, ಲಿಖಿತ ಹೇಳಿಕೆಯಲ್ಲಿ ರೂ.40,000/- ಪಡೆದಿದ್ದೇನೆ ಎಂದು ಹೇಳಿದ್ದು, ನಾನು ಹೇಳಿರುವ ಈ ಎರಡು ವಿಚಾರಗಳು ಸುಳ್ಳು ಎಂದರೆ ಸರಿಯಲ್ಲ. ಚಿನ್ನ ಬೆಳ್ಳಿಯನ್ನು ನಾನು ವಾದಿಯ ಬಳಿ ಇಟ್ಟಿದ್ದೆ ಎಂಬ ಬಗ್ಗೆ ನ್ಯಾಯಾಲಯಕ್ಕೆ ದಾಖಲೆಯನ್ನು

ಹಾಜರುಪಡಿಸಿಲ್ಲ, ಹಾಜರುಪಡಿಸುತ್ತೇನೆ ಎಂದು ನುಡಿಯುತ್ತಾರೆ. ನನ್ನ ನೋಟೀಸ್ ನಲ್ಲಿ ಹಾಗೂ ಲಿಖಿತ ಹೇಳಿಕೆಯಲ್ಲಿ ದಿಃ16.09.2015 ರಂದು ವಾದಿಗೆ ರೂ. 3,00,000/-ಗಳನ್ನು ಇಂಡಿಯನ್ ಓವರ್ಸೀಸ್ ಬ್ಯಾಂಕಿನಿಂದ ನಗದಾಗಿ ನಾನು ಪಡೆದು ವಾದಿಗೆ ನೀಡಿರುತ್ತೇನೆ ಎಂದು ಬರೆಯಿಸಿದ್ದೇನೆ ಎಂದರೆ ಸರಿ. ಅದೇ ರೀತಿ ದಿಃ23.09.2015 ರಂದು ಅದೇ ಬ್ಯಾಂಕಿನಿಂದ ರೂ.80,000/-ಗಳನ್ನು ನಗದಾಗಿ ಪಡೆದು ವಾದಿಗೆ ನೀಡಿರುತ್ತೇನೆ ಎಂದು ಬರೆಯಿಸಿದ್ದೇನೆ ಎಂದರೆ ಸರಿ.

12. ನಿಡಿ.9 ರಂತೆ ಬ್ಯಾಂಕ್ ಸ್ಟೇಟ್ ಮೆಂಟ್ ಹಾಜರುಪಡಿಸುತ್ತೇನೆ ಎಂದರೆ ಸರಿ. ಸದರಿ ಸ್ಟೇಟ್ ಮೆಂಟ್ ಪ್ರಕಾರ ದಿಃ 10.08.2015 ರಿಂದ ದಿಃ 27.11.2015 ರವರೆಗೆ ನನ್ನ ಬ್ಯಾಂಕಿನ ಖಾತೆಯಲ್ಲಿ ಕೇವಲ ರೂ.506/-ಗಳು ಮಾತ್ರ ಬಾಕಿ ಇತ್ತು ಎಂದರೆ ಸಾಕ್ಷಿ ಬ್ಯಾಂಕ್ ಮ್ಯಾನೇಜರ್ ಅವರಿಂದ ಹೊಗೆ ಸೊಪ್ಪು ಬಿಡುತ್ತೇನೆ ಎಂದು ಮುಂಗಡವಾಗಿ ಹಣ ಪಡೆದು ವಾದಿಗೆ ನೀಡಿರುತ್ತೇನೆ ಎನ್ನುತ್ತಾರೆ.

13. ನನ್ನ ಲಿಖಿತ ಹೇಳಿಕೆಯ 12 ನೇ ಪ್ಯಾರಾದಲ್ಲಿ ನನ್ನ ಇಂಡಿಯನ್ ಓವರ್ಸೀಸ್ ಬ್ಯಾಂಕ್, ಹುಣಸೂರು ಖಾತೆಯಿಂದ ದಿಃ 16.09.2015 ರಂದು ರೂ.3,00,000/- ಗಳನ್ನು ಹಾಗೂ ದಿಃ 23.09.2015 ರಂದು ಅದೇ ಬ್ಯಾಂಕಿನಿಂದ ರೂ.80,000/- ಗಳನ್ನು ಪಡೆದು ವಾದಿಗೆ ಕೊಟ್ಟಿರುತ್ತಾರೆ ಎಂದು ಬರೆಯಿಸಿದ್ದೇನೆ ಎಂದರೆ ಸರಿ. ಆದರೆ ನಿಡಿ.8 ರ ಪ್ರಕಾರ ನಾನು ಹೇಳಿರುವಂತ ಹಣದ ಯಾವುದೇ ವ್ಯವಹಾರ ನನ್ನ ಬ್ಯಾಂಕ್ ಖಾತೆ ಮೂಲಕ ಆಗಿಲ್ಲ ಎಂದರೆ ಸರಿಯಲ್ಲ. ರೂ.3,00,000/- ಗಳನ್ನು ಹಾಗೂ ರೂ.80,000/- ಗಳನ್ನು ವಾದಿಗೆ ಕೊಟ್ಟಿರುತ್ತೇನೆ ಎಂಬ ಬಗ್ಗೆ ದಾಖಲಾತಿ ಇದೆಯಾ ಎಂದರೆ ದಾಖಲಾತಿ ಇದೆ, ಹಾಜರುಪಡಿಸುತ್ತೇನೆ ಎಂದು ನುಡಿಯುತ್ತಾರೆ.

14. MR No.56/2000-01 ರಂತೆ ಪೌತಿ ಮೇರೆಗೆ ನನ್ನ ಹೆಸರಿಗೆ ದಾವ ಸ್ವತಿನ ಸರ್ವೇ ನಂ.24/1/ಬಿ ಯ ಖಾತೆ ಇದೆ ಎಂದರೆ ಸರಿ. ದಾವ ಸರ್ವೇ ನಂಬರಿಗೆ ಸಂಬಂಧಪಟ್ಟಂತೆ ನಾನು O.S.262/2009 ರಂತೆ ನನ್ನ ಅಣ್ಣ ತಮ್ಮಂದಿರ ವಿರುದ್ಧ

ವಿಭಾಗದ ಕೇಸ್ ಹಾಕಿದ್ದೇನೆ ಎಂದರೆ ಸರಿ. ಸದರಿ ದಾವದ ಷೆಡ್ಯೂಲ್ ನಲ್ಲಿ ಸರ್ವೇ ನಂ.**24/1/**ಬಿ ರಲ್ಲಿ **1** ಎಕರೆ 9 ಗುಂಟೆ ಸ್ವತ್ತನ್ನು ಸೇರಿಸಿದ್ದೇನೆ. ಸರ್ವೇ ನಂ.24/1 ರಿಂದ 24/5 ರವರೆಗೆ 5 ಪೋಡಾಗಿದೆ ಎಂದರೆ 3 ಪೋಡಾಗಿತ್ತು ಈಗ 5 ಪೋಡಾಗಿರಬಹುದು ನನಗೆ ಗೊತ್ತಿಲ್ಲ. ಸದರಿ ದಾವೆಯಲ್ಲಿ ನನ್ನ ಎಲ್ಲಾ ಅಣ್ಣ ತಮ್ಮಂದಿರನ್ನು ಪಕ್ಷಗಾರರಾಗಿ ಸೇರ್ಪಡೆ ಮಾಡಿದ್ದೇನೆ. ದಾವ ಸರ್ವೇ ನಂ.**24** ರಲ್ಲಿ ನನಗೂ ಭಾಗ ಇದೆ ಎಂದು ಹೇಳಿದ್ದೇನೆ ಎಂದರೆ ಸರಿ. ಸರ್ವೇ ನಂ.**24** ರಲ್ಲಿ ನನಗೂ ಭಾಗ ಇದೆ ಎಂದು ವಾದಿಗೆ ನಿಪಿ.**5** ರ ಆರ್.ಟಿ.ಸಿ ತೋರಿಸಿ ರೂ.**5,00,000/-**ಗಳಿಗೆ ಮಾತುಕತೆಯಾಗಿ ಮುಂಗಡವಾಗಿ ದಿಃ **25.09.2014** ರಂದು ರೂ.**3,25,000/-**ಗಳನ್ನು ಪಡೆದಿರುತ್ತೇನೆ ಎಂದರೆ ಸುಳ್ಳು.

**ಮುಂದುವರಿದ ಪಾಟೀಸವಾಲುಃ ಕಾಲಾವಕಾಶ ಕೋರಿದ್ದು, ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.,

(ಜೈಬುನ್ನಿಸಾ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.